ಪೋಕ್ಸೊ ಕಾಯಿದೆಯ ಉಲ್ಲಂಘನೆ ಮಾಡಿದ್ದಲ್ಲಿ ಮಕ್ಕಳ ಮೇಲೆ ಆಗುವ ಪರಿಣಾಮಗಳನ್ನು ಕುರಿತು ಶಿಕ್ಷಕರ ಮೂಲಕ ಮಾಹಿತಿ ಕೊಡಿಸಲೇಬೇಕು. ಈ ಬೆಳವಣಿಗೆಗಳನ್ನು ಕುರಿತು ನ್ಯಾಯಾಲಯಕ್ಕೆ ಮಾಹಿತಿ ಒದಗಿಸಬೇಕು'.

## ಕರ್ನಾಟಕದಲ್ಲಿ ನಡೆದಿರುವ ಪ್ರಯತ್ನಗಳು

ಮಕ್ಕಳನ್ನು ಲೈಂಗಿಕ ಶೋಷಣೆಯ ವಿರುದ್ಧ ರಕ್ಷಿಸಬೇಕು ಎನ್ನುವ ಪ್ರಚಾರಾಂದೋಲನ ಕರ್ನಾಟಕದಲ್ಲಿ 1990ರ ದಶಕದಿಂದಲೇ ಸ್ವಯಂಸೇವಾ ಸಂಘಟನೆಗಳಿಂದ ನಡೆದಿದೆ. ಮಕ್ಕಳ ಮೇಲಾಗುವ ಅಪರಾಧಿಕ ಕೃತ್ಯಗಳು ವರದಿಯಾದಾಗ ಪ್ರತಿಭಟನೆ ಮತ್ತು ನ್ಯಾಯಬದ್ಧ ತನಿಖೆಗೆ ಒತ್ತಾಯ, ಶಾಲಾ ಮಕ್ಕಳಿಗೆ, ಪೋಷಕರಿಗೆ ಹಾಗೂ ಶಿಕ್ಷಕ ವರ್ಗಕ್ಕೆ ಈ ಕುರಿತು ಮಕ್ಕಳ ಹಕ್ಕುಗಳ ದೃಷ್ಟಿಕೋನದಲ್ಲಿ ಶಿಕ್ಷಣ, ಮಾಹಿತಿ ಒದಗಿಸಲು ಪ್ರಯತ್ನಗಳನ್ನು ನಡೆಸಿವೆ.

ಸಮಗ್ರ ಶಿಕ್ಷಣ ಕರ್ನಾಟಕ ಅಡಿಯಲ್ಲಿ ಶಿಕ್ಷಣ ಇಲಾಖೆ 'ಮಕ್ಕಳ ಸಾರಥಿ' ಹೆಸರಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 68ನೇ ತರಗತಿಯ ವಿದ್ಯಾರ್ಥಿಗಳಿಗೆ ಕತೆಗಳು, ಚಿತ್ರಗಳ ಮೂಲಕ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ ವಿಚಾರಗಳನ್ನು ತಲುಪಿಸುವ ಯತ್ನವನ್ನು ನಡೆಸಿತು. ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯವು [DSERT] ಪೋಕ್ಸೊ ಕುರಿತು ರಚಿಸಲಾದ ತರಬೇತಿ ಕೈಪಿಡಿ ಬಳಸಿ ರಾಜ್ಯದಾದ್ಯಂತ ಶಿಕ್ಷಕರ ತರಬೇತಿ ನಡೆಸುತ್ತಿದೆ [ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ತರಬೇತಿ ಮಾಡ್ಯೂಲ್‌ಗಳು]. ಅವರ ಮೂಲಕ ಮಕ್ಕಳಿಗೆ ಮತ್ತು ಪೋಷಕರಿಗೆ ಪಾಕ್ಸೋ ಮತ್ತು ಸಂಬಂಧಿತ ವಿಚಾರಗಳು, ಚೈಲ್ಡ್‌ಲೈನ್ 1098, ದೂರು ಕೊಡುವುದು ಹಾಗೂ ಶಾಲೆಗಳನ್ನು ಮಕ್ಕಳ ಸ್ನೇಹಿಯನ್ನಾಗಿಸುವ ದಿಶೆಯಲ್ಲಿ ಕ್ರಮಗಳು ನಡೆಯುತ್ತಿವೆ.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕ: ಲೈಂಗಿಕ ಶೋಷಣೆಗೆ ಈಡಾದ ಸಂತ್ರಸ್ತ ಮಕ್ಕಳಿಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, 'ನೆರವು ನೀಡುವ ವ್ಯಕ್ತಿ'ಗಳನ್ನು ನೇಮಿಸುತ್ತದೆ. ಸಂತ್ರಸ್ತ ಮಗು ಮತ್ತು ಕುಟುಂಬಕ್ಕೆ ಅತ್ಯಾವಶ್ಯಕವಾಗಿರುವ ಆಪ್ತಸಮಾಲೋಚನೆ, ಕಾನೂನು ಮಾಹಿತಿ, ವೈದ್ಯಕೀಯ ನೆರವು ಹಾಗೂ ನ್ಯಾಯಾಲಯದ ಪ್ರಕ್ರಿಯೆಗಳನ್ನು ಕುರಿತು ಇವರು ಸಹಾಯ ಮಾಡುತ್ತಾರೆ. ಸಂತ್ರಸ್ತ ಮಕ್ಕಳಿಗೆ ಸರ್ಕಾರದಿಂದ ಪರಿಹಾರ ಮತ್ತು ಪುನರ್ವಸತಿಗಾಗಿ ಧನ ಸಹಾಯವನ್ನೂ ನೀಡಲಾಗುತ್ತದೆ.

ಶಾಲಾ ಸುರಕ್ಷತಾ ಸಮಿತಿ: ರಾಜ್ಯದ ಸರಕಾರಿ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ (SDMC) ಮತ್ತು ಸರ್ಕಾರೇತರ ಶಾಲೆಗಳಲ್ಲಿ ಶಾಲಾ ಉಸ್ತುವಾರಿ ಸಮಿತಿ (SMC) ಕಡ್ಡಾಯವಾಗಿ ಇದ್ದು, ಅದರಲ್ಲಿ ಪೋಷಕರು ಮತ್ತು ಮಕ್ಕಳ ಪ್ರತಿನಿಧಿಗಳು ಇರಲೇಬೇಕು. ಈ ಸಮಿತಿಗಳಲ್ಲಿ ಮಕ್ಕಳ ರಕ್ಷಣೆ ಕುರಿತು ಮುಕ್ತ ಚರ್ಚೆಗಳು ನಡೆಯಲೇಬೇಕು. ಜೊತೆಗೆ ಶಾಲೆಗಳಲ್ಲಿ ಕರ್ನಾಟಕ ಸರ್ಕಾರ ನಿರ್ದೇಶಿಸಿರುವಂತೆ, "ಶಾಲಾ ಮಕ್ಕಳ ರಕ್ಷಣಾ ನೀತಿ" ಜಾರಿಯಲ್ಲಿರಬೇಕು.

## ನಡವಳಿಕೆ-ಭಾಷೆ ಬದಲಿಸಲೇಬೇಕು

ಮೊತ್ತ ಮೊದಲನೆಯದಾಗಿ ಮಕ್ಕಳೊಡನೆ ಮುಕ್ತವಾಗಿ ಮಾತನಾಡುವುದನ್ನು ಎಲ್ಲ ಪೋಷಕರು ಕಲಿತುಕೊಳ್ಳಬೇಕು, ಅದನ್ನು ಅಳವಡಿಸಿಕೊಳ್ಳಲೇಬೇಕು. ಎರಡನೆಯದಾಗಿ ಮಕ್ಕಳು ಏನಾದರೂ ಹೇಳುವಾಗ ಅದನ್ನು ಪೂರ್ಣವಾಗಿ ಕೇಳಬೇಕು ಮತ್ತು ನಂಬಬೇಕು. 'ಸುಳ್ಳು ಹೇಳ್ತೀಯಾ' ಎನ್ನಬೇಡಿ. ಇಲ್ಲವಾದರೆ ತಮ್ಮ ಮೇಲೆ ಏನೋ ಬೇಡದ್ದು ಆದಾಗ ನಂಬುವ ಮನೋಭಾವವಿಲ್ಲದ ಪೋಷಕರಿಗೆ ಏನೂ ಹೇಳದೇ ಇರಬಹುದು. ಮಕ್ಕಳು ತಮ್ಮ ಕೆಟ್ಟ ಅನುಭವ ಕುರಿತು ಹೇಳಿದಾಗ, ನೀನೇ ಏನೋ ತಪ್ಪು ಮಾಡಿದ್ದೀಯ, ಕೆಟ್ಟದು ಮಾಡಿಬಿಟ್ಟಿರುವೆ ಎನ್ನುವಂತಹ ಭಾವನೆ ತೋರಲೇಬಾರದು. ಗಾಬರಿಬಿದ್ದು ಎಲ್ಲರನ್ನೂ ಹೆದರಿಸಿ, ಆಕಾಶ ತಲೆ ಮೇಲೆ ಬಿದ್ದಂತೆ ವರ್ತಿಸಬಾರದು. 'ನೀನು ನನಗೆ ಹೇಳಿದ್ದು ಒಳ್ಳೆಯದಾಯಿತು. ಇದರಲ್ಲಿ ನಿನ್ನ ತಪ್ಪು ಏನೂ ಇಲ್ಲ' ಎನ್ನಲೇಬೇಕು ಮತ್ತು ರಕ್ಷಣೆಗೆ ಕ್ರಮ ಕೈಗೊಳ್ಳಲು ಮುಂದಾಗಬೇಕು.

'ಮಕ್ಕಳ ಲೈಂಗಿಕ ಶೋಷಣೆ' ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ. ಇದರಿಂದ ಮಕ್ಕಳ ಮತ್ತು ಕುಟುಂಬಗಳ ಮೇಲೆ ದೀರ್ಘಕಾಲಿಕ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆಘಾತ, ಇಡೀ ಕುಟುಂಬ ಅವಮಾನಕ್ಕೀಡಾಗುವ, ಖಿನ್ನತೆಗೆ ಜಾರುವ, ಪ್ರಾಣಾಪಾಯವನ್ನೂ ಮಾಡಿಕೊಳ್ಳುವ ಸಂಭವವಿರುತ್ತದೆ. ವಿವಿಧೆಡೆ ಆಗಬಹುದಾದ ಮತ್ತು ಆಗುತ್ತಿರುವ ಮಕ್ಕಳ ಲೈಂಗಿಕ ಶೋಷಣೆ ಮತ್ತು ದೌರ್ಜನ್ಯವನ್ನು ಗುರುತಿಸಲು, ತಡೆಯಲು, ವರದಿ ಮಾಡಲು ಮತ್ತು ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ವಿವಿಧ ಹಿತಾಸಕ್ತಿದಾರರ ಸಾಮರ್ಥ್ಯವನ್ನು ಬೆಳೆಸಲು ಸಂಬಂಧಿಸಿದವರೆಲ್ಲಾ ಈ ಕುರಿತು ತರಬೇತಿಗಳಲ್ಲಿ ಭಾಗವಹಿಸಬೇಕು ಮತ್ತು ಇನ್ನೂ ಅರಳುತ್ತಿರುವ ಮತ್ತು ಬೆಳೆಯುತ್ತಿರುವ ಮಕ್ಕಳನ್ನು ರಕ್ಷಿಸಲು ಲೈಂಗಿಕ ಶೋಷಣೆ ವಿಚಾರಗಳನ್ನು ತಡೆಯಲು ಮುಕ್ತವಾಗಿ ಮಾತನಾಡಲೇಬೇಕು. [ಈ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ಉಚಿತ ದೂರವಾಣಿ ಸಂಖ್ಯೆ 14416 ಟೆಲಿಮನಸ್ ಸಂಪರ್ಕಿಸಿ].

### ದೂರು ಕೊಡುವುದು ಹೇಗೆ

ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಚೈಲ್ಡ್‌ಲೈನ್ 1098 ಅಥವಾ 112ಗೆ ಕರೆ ಮಾಡಿ ತಿಳಿಸಬಹುದು ಮತ್ತು ಸಹಾಯಕ್ಕೆ ಕೋರಬಹುದು. ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯನ್ನು ಸಂಪರ್ಕಿಸಬಹುದು. **POCSO e-box: ncpcr.gov.in** ನಲ್ಲಿ ಆನ್‌ಲೈನ್ ದೂರು ಕೊಡಬಹುದು.

## ಮೌನ ಅಥವಾ ಏನೂ ಕ್ರಮ ಕೈಗೊಳ್ಳದಿರುವುದು ಯಾಕೆ ಅಪಾಯ?

ಮಕ್ಕಳ ಮೇಲಾಗಿರುವ ಲೈಂಗಿಕ ಶೋಷಣೆ ಕುರಿತು ತಿಳಿದ ಯಾರೇ ಆಗಲಿ ಅದನ್ನು ಮುಚ್ಚಿಟ್ಟರೆ ಆರೋಪಿ ಇನ್ನಷ್ಟು ಮಕ್ಕಳಿಗೆ ತೊಂದರೆ ಕೊಡುವ ಸಾಧ್ಯತೆಯಿದೆ. ಶೋಷಣೆಗೊಳಗಾದ ಮಗು ಆತಂಕ, ಖಿನ್ನತೆಗೆ ಒಳಗಾಗಬಹುದು, ಆತ್ಮಹತ್ಯೆಗೆ ಪ್ರಯತ್ನಿಸಬಹುದು. ಇಲ್ಲವೇ ಶಿಕ್ಷಣದಿಂದ ವಿಮುಖವಾಗುವುದು, ತೀವ್ರ ಲೈಂಗಿಕಾಸಕ್ತಿ ಅಥವಾ ಅದಕ್ಕೆ ವಿರುದ್ಧವಾಗಿ ವಯಸ್ಕರಾದ ಮೇಲೂ ಲೈಂಗಿಕ ಕ್ರಿಯೆಯೆಂದರೆ ಭಯ ಬೆಳೆಸಿಕೊಂಡು ಇನ್ನಷ್ಟು ತೊಂದರೆಗೆ ಸಿಲುಕಬಹುದು. ಮಕ್ಕಳೊಡನೆ ಮಾತುಕತೆಯ ಮೂಲಕ, ಆಪ್ತ ಸಮಾಲೋಚನೆ ಒದಗಿಸಿ, ವೈದ್ಯಕೀಯ ಮತ್ತು ಕಾನೂನಾತ್ಮಕವಾಗಿ ಮಕ್ಕಳನ್ನು ರಕ್ಷಿಸಬಹುದು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ/ಶೋಷಣೆ ಆಗಿರುವುದು ತಿಳಿದೂ ದೂರು ದಾಖಲಿಸದಿರುವವರಿಗೆ ಪಾಕ್ಸೋ ಕಾಯಿದೆಯಂತೆ ಆರು ತಿಂಗಳ ಜೈಲುವಾಸದ ಶಿಕ್ಷೆ ವಿಧಿಸಬಹುದು (ಸೆಕ್ಷನ್ 19: Mandatory reporting).

ಬಹಳ ಮುಖ್ಯವಾಗಿ ನಿಮ್ಮ ಮಕ್ಕಳು ಕಲಿಯುವ ಶಾಲೆ ಕಾಲೇಜಿನಲ್ಲಿ 'ಮಕ್ಕಳ ರಕ್ಷಣಾ ನೀತಿ' ಮತ್ತು 'ಮಕ್ಕಳ ರಕ್ಷಣಾ ಸಮಿತಿ' ಇರುವುದನ್ನು ಹಾಗೂ ಶಾಲೆ ಕಾಲೇಜಿನ ಆವರಣದಲ್ಲಿ ಈ ಕುರಿತು ಚೈಲ್ಡ್‌ಲೈನ್ 1098 ಸಂಖ್ಯೆಯೊಡನೆ ಭಿತ್ತಿಪತ್ರ, ಫಲಕಗಳನ್ನು ಹಾಕಿರುವುದನ್ನು ಖಾತರಿಪಡಿಸಿಕೊಳ್ಳಿ. ಮನೆಗಳಲ್ಲಿ, ವಸತಿ ಸಮುಚ್ಚಯಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಿ.

ಪ್ರತಿಕ್ರಿಯಿಸಿ: feedback@sudha.co.in

